# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.**

ಅಂತರ್ಜಾಲ : https://kptcl.karnataka.gov.in

ದೂರವಾಣಿ ಸಂಖ್ಯೆ : 080-22212343

ಇ-ಮೇಲ್ ವಿಳಾಸ : director.ahr.kptcl@gmail.com


ಕವಿಪ್ರನಿನಿ/ಪ್ರವ್ಯತಾ/ಸಿವಿಲ್(ಬಿ9)/11/2023/ವ್ಯಸ್ಥಿ (ಇ-52229)

27 MAR 2023

## ಸುತ್ತೋಲೆ

**ವಿಷಯ:** ರಾಜ್ಯಾದ್ಯಂತ ಕವಿಪ್ರನಿನಿ ಜಾಗ/ಕಟ್ಟಡಗಳಿಗೆ ಶಾಸನಬದ್ಧ ಆಸ್ತಿ ತೆರಿಗೆಯನ್ನು ನಿಗಧಿತ ಅವಧಿಯೊಳಗೆ ಪಾವತಿಸುವ ಬಗ್ಗೆ.

**ಉಲ್ಲೇಖ:**
1. ಆದೇಶ ಸಂಖ್ಯೆ ಬಿ9/3802/2003-04 ದಿನಾಂಕ 29/05/2003.
2. ಸುತ್ತೋಲೆ ಸಂಖ್ಯೆ ಬಿ9/3802/2003-04 ದಿನಾಂಕ 02/09/2004.
3. ಆದೇಶ ಸಂಖ್ಯೆ ಬಿ9/4948/2004-05 ದಿನಾಂಕ 29/04/2005.
4. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ)/ಎ/ಸಿಎಸ್/ಎಎಒ.1/ಸಿವೈಎಸ್:69 ದಿನಾಂಕ 12/01/2006.
5. ಸುತ್ತೋಲೆ ಸಂಖ್ಯೆ ಬಿ9/3324/2000-01 ದಿನಾಂಕ 21/04/2006.
6. ಆದೇಶ ಸಂಖ್ಯೆ ಬಿ9/4948/2004-05 ದಿನಾಂಕ 26/10/2006.

ರಾಜ್ಯಾದ್ಯಂತ ನಿಗಮದ ಜಾಗಗಳಿಗೆ ಕಾಲಕಾಲಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಆಸ್ತಿ ತೆರಿಗೆ ಪಾವತಿಸದಿರುವುದು ಹಾಗೂ ಹಲವಾರು ಪ್ರಕರಣಗಳಲ್ಲಿ ಆಸ್ತಿ ತೆರಿಗೆ ಮೇಲೆ ಬಡ್ಡಿ ವಿಧಿಸಿದ್ದು, ಸದರಿ ಬಡ್ಡಿ ಮೊತ್ತವನ್ನು ಪಾವತಿಸುವ ಪ್ರಸ್ತಾವನೆಗಳನ್ನು ಸಲ್ಲಿಸಲಾಗುತ್ತಿದೆ. ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) ರವರು ನಿಗಮದ ಜಾಗಗಳನ್ನು ಎಸ್ಕಾಂ ಗಳಿಗೆ ಹಾಗೂ ನೌಕರರ/ಅಧಿಕಾರಿಗಳ ಸಂಘ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡಿದ್ದರೂ ಸಹ ಸದರಿ ಜಾಗಗಳಿಗೂ ಸಹ ಹಲವಾರು ವಿಭಾಗಗಳಲ್ಲಿ ನಿಗಮದ ವತಿಯಿಂದಲೇ ಆಸ್ತಿ ತೆರಿಗೆ ಪಾವತಿಸಲಾಗುತ್ತಿದೆಯೆಂದು ತಿಳಿಸಿರುತ್ತಾರೆ. ಸದರಿ ವಿಷಯವನ್ನು ನಿಗಮ ಗಂಭೀರವಾಗಿ ಪರಿಗಣಿಸಿದೆ.

ನಿಗಮದ ಜಾಗಗಳನ್ನು Arms-length arrangement ರನ್ವಯ ಗುತ್ತಿಗೆ ಆಧಾರದ ಮೇಲೆ ಎಸ್ಕಾಂ ಗಳಿಗೆ ನೀಡಲಾಗಿರುವ ಪ್ರಕರಣಗಳಲ್ಲಿ ಸದರಿ ಆದೇಶದನ್ವಯ ಆಸ್ತಿ ತೆರಿಗೆಯನ್ನು ಎಸ್ಕಾಂ ಗಳೆ ಪಾವತಿಸಬೇಕಾಗಿರುತ್ತದೆ ಹಾಗೂ ಈ ಬಗ್ಗೆ ಆಸ್ತಿ ಪುಸ್ತಕಗಳಲ್ಲಿ ದಾಖಲಿಸಬೇಕಾಗಿರುತ್ತದೆ.

ನಿಗಮದ ನೌಕರರ/ಅಧಿಕಾರಿಗಳ ಸಂಘ ಸಂಸ್ಥೆಗಳಿಗೆ ಸಮುದಾಯ ಭವನ/ಅಥಿತಿ ಗೃಹ/ಸಭಾಂಗಣ ಇತ್ಯಾದಿಗಳ ನಿರ್ಮಾಣಕ್ಕಾಗಿ ರಾಜ್ಯಾದ್ಯಂತ ನಿಗಮದ ಜಾಗಗಳನ್ನು 30 ವರ್ಷಗಳ ಲೀಸ್ ಅವದಿಯ ಮೇಲೆ ನೀಡಲಾಗಿದ್ದು, ಸದರಿ ಜಾಗಗಳ ಹಾಗೂ ಅಲ್ಲಿನ ಕಟ್ಟಡಗಳಿಗೆ ಆಸ್ತಿ ತೆರಿಗೆಯನ್ನು ಪಾವತಿಸುವುದು ಸಂಬಂಧಪಟ್ಟ ಸಂಘ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ.

ಮುಂದುವರೆದಂತೆ, ನಿಗಮದ ಕಟ್ಟಡಗಳನ್ನು ಎಸ್ಕಾಂ ಗೆ ಬಾಡಿಗೆ ಆಧಾರದಲ್ಲಿ ನೀಡಿರುವ ಪ್ರಕರಣಗಳಲ್ಲಿ Arms-length arrangement ರನ್ವಯ ಸದರಿ ಕಟ್ಟಡಗಳ ಆಸ್ತಿ ತೆರಿಗೆಯನ್ನು ನಿಗಮದ ವತಿಯಿಂದಲೆ ಪಾವತಿಸಬೇಕಾಗಿರುತ್ತದೆ.

ನಿಗಮದ ಜಾಗ/ಕಟ್ಟಡಗಳಿಗೆ ಸಂಬಂಧಪಟ್ಟ ಪಾಲಿಕೆಗಳು/ನಗರ ಸಭೆಗಳು/ಪುರಸಭೆಗಳು/ಪಟ್ಟಣ ಪಂಚಾಯಿತಿಗಳು/ಗ್ರಾಮ ಪಂಚಾಯಿತಿಗಳಿಗೆ ಆಸ್ತಿ ತೆರಿಗೆ ಪಾವತಿಸುವುದು ಶಾಸನಬದ್ಧ ವಾಗಿದ್ದು ನಿಗಧಿತ ಅವಧಿಯಲ್ಲಿ ಪಾವತಿಸದಿದ್ದಲ್ಲಿ, ಆಸ್ತಿ ತೆರಿಗೆ ಮೇಲೆ ಬಡ್ಡಿ ಪಾವತಿಸಬೇಕಾಗುತ್ತದೆ. ಅಲ್ಲದೆ, ಆಯಾ ಸಾಲಿನ ಆಸ್ತಿ ತೆರಿಗೆಯನ್ನು ಏಪ್ರಿಲ್ ಮಾಹೆಯಲ್ಲಿ ಮುಂಗಡವಾಗಿ ಪಾವತಿಸಿದ್ದಲ್ಲಿ, ಆಸ್ತಿ ತೆರಿಗೆ ಮೇಲೆ ಶೇಕಡಾ 5 ರಷ್ಟು ರಿಯಾಯಿತಿ ಸಹ ಪಡೆಯಲು ಅವಕಾಶ ನೀಡಲಾಗಿದೆ.

ಈ ಸಂಬಂಧ, ಉಲ್ಲೇಖದ ನಿಗಮದ ಆದೇಶಗಳು ಹಾಗೂ ಸುತ್ತೋಲೆಗಳಲ್ಲಿ ಆಸ್ತಿ ತೆರಿಗೆ ಪಾವತಿ ಬಗ್ಗೆ ಮಾರ್ಗಸೂಚಿ ನೀಡಲಾಗಿದೆ. ಆದಾಗ್ಯೂ, ಹಲವಾರು ಪ್ರಕರಣಗಳಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸದಿರುವುದು ಮತ್ತು ಬಡ್ಡಿ ಪಾವತಿಸಲು ಅನುಮೋದನೆ ಕೋರುವುದು ಹಾಗೂ ಕವಿಪ್ರನಿನಿಯಿಂದ ಲೀಸ್ ಆಧಾರದ ಮೇಲೆ ನೀಡಿದ ಜಾಗಗಳಿಗೆ ಅನುಭವದಾರರು ಪಾವತಿಸದಿರುವುದು ಇತ್ಯಾದಿಗಳನ್ನು ನಿಗಮ ಗಂಭೀರವಾಗಿ ಪರಿಗಣಿಸಿದ್ದು, ಈ ಕೆಳಕಂಡಂತೆ ನಿರ್ದೇಶನ ನೀಡಲಾಗಿದೆ.

1. ನಿಗಮದ ಎಲ್ಲಾ ಜಾಗಗಳು/ಕಟ್ಟಡಗಳಿಗೆ ಕಾಲಕಾಲಕ್ಕೆ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಆಸ್ತಿ ತೆರಿಗೆ ಪಾವತಿಸುವುದು, ಸದರಿ ಆಸ್ತಿಗಳ ಲೆಕ್ಕ ಪುಸ್ತಕ ನಿರ್ವಹಿಸುವ ಟಿಎಲ್ ಮತ್ತು ಎಸ್‌ಎಸ್ ವಿಭಾಗದ ಸಂಪೂರ್ಣ ಜವಾಬ್ದಾರಿಯಾಗಿರುತ್ತದೆ.
2. ಟಿಎಲ್ ಮತ್ತು ಎಸ್‌ಎಸ್ ವಿಭಾಗದ ವ್ಯಾಪ್ತಿಯಲ್ಲಿನ ಎಲ್ಲಾ ಜಾಗ/ ಕಟ್ಟಡಗಳಿಗೆ ಆಸ್ತಿ ತೆರಿಗೆಯನ್ನು ಪಾವತಿಸಲು ಆಯಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹಾಗೂ ಲೆಕ್ಕಾಧಿಕಾರಿಗಳು ರವರು ಕ್ರಮಕೈಗೊಳ್ಳುವುದು. ಆಸ್ತಿ ತೆರಿಗೆ ಪಾವತಿಯಲ್ಲಿನ ವಿಳಂಬದಿಂದ ಬಡ್ಡಿ ಪಾವತಿಸಬೇಕಾದಲ್ಲಿ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಹಾಗೂ ಲೆಕ್ಕಾಧಿಕಾರಿಗಳು ರವರು ನೇರ ಹೊಣೆಗಾರರಾಗುತ್ತಾರೆ.
3. ನಿಗಮದ ಜಾಗ/ಕಟ್ಟಡಗಳ ವಿಸ್ತೀರ್ಣ ಹಾಗೂ ಅದಕ್ಕೆ ಸಂಬಂಧಿಸಿದ ಆಸ್ತಿ ತೆರಿಗೆ ಲೆಕ್ಕಾಚಾರವನ್ನು ಸಂಬಂಧಪಟ್ಟ ಸಿವಿಲ್ ಶಾಖೆಯ ದೃಢೀಕರಣ ಪಡೆದು ಪಾವತಿಸಲು ಸಂಬಂಧಪಟ್ಟ ಟಿಎಲ್ ಮತ್ತು ಎಸ್‌ಎಸ್ ವಿಭಾಗ ಕ್ರಮಕೈಗೊಳ್ಳುವುದು.
4. ನೂತನ ಉಪಕೇಂದ್ರಗಳ ನಿರ್ಮಾಣಕ್ಕಾಗಿ ಖರೀದಿ ಮಾಡುವ ಜಮೀನುಗಳನ್ನು ಉಪಕೇಂದ್ರ ನಿರ್ಮಿಸಿದ ನಂತರ ಸಂಬಂಧಪಟ್ಟ ಟಿಎಲ್ ಮತ್ತು ಎಸ್‌ಎಸ್ ವಿಭಾಗಕ್ಕೆ ಭೂ ದಾಖಲೆಗಳೊಂದಿಗೆ ಹಸ್ತಾಂತರಿಸಲು ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಬೃಹತ್ ಕಾಮಗಾರಿ ವಿಭಾಗ ರವರು ಕ್ರಮಕೈಗೊಳ್ಳುವುದು. ಸದರಿ ಜಮೀನನ್ನು ಟಿಎಲ್ ಮತ್ತು ಎಸ್‌ಎಸ್ ವಿಭಾಗಕ್ಕೆ ಹಸ್ತಾಂತರಿಸುವ ತನಕ ಆಸ್ತಿ ತೆರಿಗೆಯನ್ನು ಪಾವತಿಸುವ ಸಂಪೂರ್ಣ ಜವಾಬ್ದಾರಿ ಸಂಬಂಧಪಟ್ಟ ಬೃಹತ್ ಕಾಮಗಾರಿ ವಿಭಾಗಕ್ಕೆ ಸೇರಿರುತ್ತದೆ.

5. ಎಸ್ಕಾಂ ಗಳಿಗೆ ಗುತ್ತಿಗೆ ಆಧಾರದ ಮೇಲೆ ನೀಡುವ ಜಾಗಗಳ ಗುತ್ತಿಗೆ ಕರಾರನ್ನು ನೋಂದಣಿ ಮಾಡಿಕೊಂಡಿದ್ದಲ್ಲಿ ಸದರಿ ಜಾಗಗಳ ಆಸ್ತಿ ತೆರಿಗೆಯನ್ನು ಎಸ್ಕಾಂ ಗಳ ವತಿಯಿಂದಲೇ ಪಾವತಿಸುವುದು. ಒಂದು ವೇಳೆ ಸದರಿ ಜಾಗಗಳ ಗುತ್ತಿಗೆ ಕರಾರನ್ನು ಈವರೆಗೂ ನೋಂದಣಿ ಮಾಡಿಕೊಂಡಿರದಿದ್ದಲ್ಲಿ, ನಿಗಮದ ವತಿಯಿಂದ ಒಟ್ಟಾರೆ ಜಾಗದ ಆಸ್ಥಿ ತೆರಿಗೆಯನ್ನು ಪಾವತಿಸಿ, ನಂತರ ಲೀಸ್ ಮಾಡಲಾದ ಜಾಗಗಳ/ಅಲ್ಲಿನ ಕಟ್ಟಡಗಳ ಸಂಬಂಧದ ಆಸ್ತಿ ತೆರಿಗೆಯನ್ನು ಸಂಬಂಧಪಟ್ಟ ಎಸ್ಕಾಂಗಳ ವಿಭಾಗಗಳಿಂದ ಡಿಮ್ಯಾಂಡ್ ಸಲ್ಲಿಸಿ ಪಡೆದುಕೊಳ್ಳುವುದು.
6. ನಿಗಮದ ಸಂಘ ಸಂಸ್ಥೆಗಳಿಗೆ ಮತ್ತು ಇತರರಿಗೆ ಲೀಸ್ ಆಧಾರದ ಮೇಲೆ ನೀಡಲಾದ ಜಾಗಗಳ ಸಂಬಂಧದ ಆಸ್ತಿ ತೆರಿಗೆಯನ್ನು ಸದರಿ ಸಂಘ ಸಂಸ್ಥೆಗಳೆ ಪಾವತಿಸುವುದು ಹಾಗೂ ನಿಗಮದ ಒಟ್ಟಾರೆ ಆಸ್ತಿಯಲ್ಲಿ ಗುತ್ತಿಗೆ ಮಾಡಲಾದ ಜಾಗವನ್ನು ಹೊರತುಪಡಿಸಿ ಉಳಿದ ಜಾಗ/ಕಟ್ಟಡಗಳಿಗೆ ನಿಗಮದ ವತಿಯಿಂದ ಆಸ್ತಿ ತೆರಿಗೆ ಪಾವತಿಸುವುದು.

ಮೇಲಿನ ನಿರ್ದೇಶನದಂತೆ ರಾಜ್ಯಾದ್ಯಂತ ಇರುವ ನಿಗಮದ ಎಲ್ಲಾ ಆಸ್ತಿಗಳಿಗೆ ಕಾಲಕಾಲಕ್ಕೆ ಆಸ್ತಿ ತೆರಿಗೆ ಪಾವತಿಸಲು ಕ್ರಮಕೈಗೊಳ್ಳುವುದು. ಪ್ರಸರಣ ವಲಯದ ನಿಯಂತ್ರಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ನಿಗಮದ ಜಾಗ/ಕಟ್ಟಡಗಳಿಗೆ ಕಾಲಕಾಲಕ್ಕೆ ಆಸ್ತಿ ತೆರಿಗೆ ಪಾವತಿಸಲಾಗುತ್ತಿದೆಯೆ ಎಂಬ ಬಗ್ಗೆ ಪರಿಶೀಲಿಸಿಕೊಂಡು ಆರ್ಥಿಕ ಸಲಹೆಗಾರರು (ಲೆ ಮತ್ತು ಸಂ) ರವರಿಗೆ ಜೂನ್ ಮಾಹೆಯೊಳಗಾಗಿ ವಾರ್ಷಿಕ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

27/3/23

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

ಪ್ರತಿಗಳು:

1. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ,
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ,
3. ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ,
4. ಎಲ್ಲಾ ಅಧೀಕ್ಷಕ ಇಂಜಿನಿಯರ್ (ವಿ)/(ಸಿವಿಲ್), ಕವಿಪ್ರನಿನಿ.
5. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು, ಅಂತರ್ಜಾಲದಲ್ಲಿ ಪ್ರಕಟಿಸಲು,
6. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)/(ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ. ಬೆಂಗಳೂರು.
10. ಎಲ್ಲಾ ಲೆಕ್ಕಾಧಿಕಾರಿಗಳು, ಕವಿಪ್ರನಿನಿ,
11. ಎಲ್ಲಾ ಸಹಾಯಕ ಇಂಜಿನಿಯರ್ (ವಿ)/(ಸಿವಿಲ್), ಕವಿಪ್ರನಿನಿ.
12. ಲೆಕ್ಕಾಧಿಕಾರಿಗಳು, ಕೊಢೀಫ್ರಿಕೇಷನ್, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.